ದಿನಾಂಕಃ **14.01.2019** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಆರ್.ಎ.ಕೆ. ವಕೀಲರಿಂದ ಃ

ನಿಪಿ.2 ಮತ್ತು ನಿಪಿ.3 ರಲ್ಲಿ ಮತಗಳ ಸಂಖ್ಯೆಯಲ್ಲಿ ಯಾವುದೇ ತಿದ್ದುಪಡಿ ಆಗಿಲ್ಲ ಎನ್ನುವುದು ಸರಿ. ಮತ ಎಣಿಕೆ ಸಂದರ್ಭದಲ್ಲಿ ನಮ್ಮ ಮಾವ ಶಿವಣ್ಣನವರು ಕೌಂಟಿಂಗ್ ಏಜೆಂಟಾಗಿ ಇದ್ದರು. ಅವರಿಗೆ ಗುರುತಿನ ಚೀಟಿಯನ್ನು ಸಹ ಚುನಾವಣಾ ಅಧಿಕಾರಿಗಳು ನಿಡೀದ್ದರು ಎಂದರೆ ಸರಿ. ಸದರಿ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಿಪಿ.2 ರಿಂದ ನಿಪಿ.4 ನ್ನು ನಮ್ಮ ಸಮಕ್ಷಮದಲ್ಲಿ ಭರ್ತಿ ಮಾಡಲಾಗಿದೆ ಎಂದರೆ ಸರಿಯಲ್ಲ. ಯಾವ ಅಭ್ಯರ್ಥಿಗೆ ಎಷ್ಟು ಮತಗಳು ಬಂದಿವೆ ಎನ್ನುವ ಬಗ್ಗೆ ರಿಟರ್ನಿಂಗ್ ಅಧಿಕಾರಿಯು ನಮಗೆ ಮತ ಯಂತ್ರವನ್ನು ತೋರಿಸಲೇ ಇಲ್ಲ. ಮತ ಎಣಿಕೆ ಕಾರ್ಯ ಪಾರದರ್ಶಕವಾಗಿ ನಡೆದಿದ್ದು ಫಲಿತಾಂಶ ಸರಿಯಾಗಿದ್ದರು ಸಹ 1ನೇ ಎದುರುದಾರರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿಜೆಎಂ., ಚಾಮರಾಜನಗರ.